**ದಿನಾಂಕ: 23 ರಿಂದ 25 ಅಕ್ಟೋಬರ 2011 ರಂದು ಜರುಗಲಿರುವ ಕಿತ್ತೂರು ಉತ್ಸವ ಆಚರಣೆ ಕುರಿತು ಉಪವಿಭಾಗಾಧಿಕಾರಿಗಳು, ಬೈಲಹೊಂಗಲ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 24.9.2011 ರಂದು ಕಿತ್ತೂರಿನಲ್ಲಿ ಜರುಗಿದ ಸ್ವಾಗತ ಉಪಸಮಿತಿಯ ಸಭೆಯ ನಡುವಳಿಗಳು.**

ಹಾಜರಿದ್ದ ಸದಸ್ಯರು:

| | |
|---|---|
| 1) ಉಪವಿಭಾಗಾಧಿಕಾರಿಗಳು, ಬೈಲಹೊಂಗಲ | ಅಧ್ಯಕ್ಷರು |
| 2) ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಳಗಾವಿ. | ಸದಸ್ಯರು. |
| 3) ವಿಶೇಷ ತಹಶೀಲ್ದಾರ, ಕಿತ್ತೂರ. | " |
| 4) ಡಿವೈ.ಎಸ್.ಪಿ. ಬೈಲಹೊಂಗಲ. | " |
| 5) ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯತ ಬೈಲಹೊಂಗಲ | " |
| 6) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕಿತ್ತೂರ | " |
| 7) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೈಲಹೊಂಗಲ.(ಪ್ರತಿನಿಧಿ) | " |
| 8) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋ.ಇ. ಬೈಲಹೊಂಗಲ.(ಪ್ರತಿನಿಧಿ) | " |
| 9) ಅಧ್ಯಕ್ಷರು, ಗ್ರಾಮ ಪಂಚಾಯತ, ಕಿತ್ತೂರ | " |
| 10) ಶ್ರೀ ಶಿವಾನಂದ ಜಕಾತಿ, ಸಾ:ಕಿತ್ತೂರ. | " |
| 11) ಶ್ರೀ ವಿಶ್ವನಾಥ ಶೆಟ್ಟರ, ಸಾ:ಕಿತ್ತೂರ.. | " |
| 12) ಶ್ರೀಮತಿ ಮದುಮತಿ ಪಟ್ಟಣಶೆಟ್ಟಿ, ಸಾ:ಕಿತ್ತೂರ. | " |
| 13) ಶ್ರೀ ವಿವೇಕಾನಂದ ಕತಿಶೆಟ್ಟಿ, ಸಾ:ಕಿತ್ತೂರ. | " |
| 14) ಶ್ರೀ ರಾಜು ಗಾಳಿ, ಸಾ:ಗಿರಿಯಾಲ | " |
| 15) ಶ್ರೀಮತಿ ಮಲ್ಲವ್ವ ಚ. ಕುಪ್ಪಸಗೌಡ್ರ ಸಾ:ಕಿತ್ತೂರ | " |

ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರನ್ನು ವಿಶೇಷ ತಹಶೀಲ್ದಾರ, ಕಿತ್ತೂರ ಇವರು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರಾದ ಮಾನ್ಯ ಉಪವಿಭಾಗಾಧಿಕಾರಿಗಳು, ಬೈಲಹೊಂಗಲ ಇವರನ್ನು ವಿನಂತಿಸಿದರು. ಉಪವಿಭಾಗಾಧಿಕಾರಿಗಳು ಸಭೆಗೆ ಹಾಜರಿದ್ದ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸುತ್ತ ಪ್ರಾಸ್ತಾವಿಕವಾಗಿ ಮಾತನಾಡುತ್ತ ಈಗಾಗಲೇ ತೆಗೆದುಕೊಂಡ ಕ್ರಮಗಳ ಕುರಿತು ಈ ಕೆಳಗಿನಂತೆ ಸಭೆಗೆ ವಿವರಿಸಿದರು.

ಕಳೆದ ವರ್ಷದಂತೆ ಈ ವರ್ಷವೂ ಕಿತ್ತೂರು ಉತ್ಸವವನ್ನು ಮೂರು ದಿನಗಳ ಕಾಲ ವಿಜೃಂಭಣೆಯಿಂದ ಆಚರಿಸಲು ಜಿಲ್ಲಾಡಳಿತವು ಸಜ್ಜಾಗಿದೆ. ಈ ಬಾರಿಯ ಉತ್ಸವದ ಉದ್ಘಾಟನಾ ಸಮಾರಂಭ, ಸಮಾರೋಪ ಸಮಾರಂಭಕ್ಕೆ ಗಣ್ಯಮಾನ್ಯ ಅತಿಥಿಗಳನ್ನು ಕರೆಯಿಸುವ ಕುರಿತು ಹಾಗೂ ವೇದಿಕೆ ಕಲಾವಿದರ ಆಯ್ಕೆಯನ್ನು ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರೊಂದಿಗೆ ಚರ್ಚಿಸಿ ಅಂತಿಮಗೊಳಿಸಲಾಗುವುದೆಂದು ಸಭಾಧ್ಯಕ್ಷರು ಸಭೆಗೆ ತಿಳಿಸಿದರು. ಉತ್ಸವದ ಸಮಯದಲ್ಲಿ ಕಿತ್ತೂರು ಪಟ್ಟಣದ ನಾಲ್ಕೂ ಪ್ರವೇಶ ದ್ವಾರಗಳಿಗೆ ಹಾಗೂ ಇತರ ಕಡೆಗೆ ಈ ಕೆಳಗಿನಂತೆ ವೀರ ಶೂರರ ಕಮಾನುಗಳನ್ನು ನಿರ್ಮಿಸಲಾಗುವುದು,

1) ರಾಷ್ಟ್ರೀಯ ಹೆದ್ದಾರಿ ಪಕ್ಕ ಚನ್ನಮ್ಮಾಜಿಯವರ ಮೂರ್ತಿ ಹತ್ತಿರ – ಶೂರ ಸಂಗೊಳ್ಳಿ ರಾಯಣ್ಣಾ ಮಹಾದ್ವಾರ.
2) ಅರಳಿಕಟ್ಟೆ ವೃತ್ತದ ಹತ್ತಿರ – ಅಮಟೂರ ಬಾಳಪ್ಪ ಮಹಾದ್ವಾರ.
3) ಬೈಲಹೊಂಗಲ ರಸ್ತೆ ಮಾನ್ಯ ಶಾಸಕರ ನಿವಾಸದ ಬಳಿ – ಬಿಚಗತ್ತಿ ಚನ್ನಬಸಪ್ಪ ಮಹಾದ್ವಾರ.
4) ನಿಚ್ಚಣಕಿ ಕ್ರಾಸ್ – ಕಿತ್ತೂರು ಉತ್ಸವಕ್ಕೆ ಸ್ವಾಗತ.
5) ಡೊಂಬರಕೊಪ್ಪ ಐಬಿ ಹತ್ತಿರ ಕಿತ್ತೂರ ಪ್ರವೇಶ ರಸ್ತೆಗೆ – ಕಿತ್ತೂರು ಉತ್ಸವಕ್ಕೆ ಸ್ವಾಗತ.
6) ರಾಷ್ಟ್ರೀಯ ಹೆದ್ದಾರಿಯ ಬೆಳಗಾವಿ & ಧಾರವಾಡ ಎರಡೂ ಬದಿಗೆ – ಕಿತ್ತೂರು ಉತ್ಸವಕ್ಕೆ ಸ್ವಾಗತ.
7) ಬೀಡಿ ರಸ್ತೆಗೆ – ಕಿತ್ತೂರು ಉತ್ಸವಕ್ಕೆ ಸ್ವಾಗತ.
8) ಕೋಟೆಯ ಆವರಣದಲ್ಲಿ ವಸ್ತುಪ್ರದರ್ಶನ ಮಹಾದ್ವಾರ.

ಕಳೆದ ವರ್ಷದ ಉತ್ಸವದ ಸಂದರ್ಭದಲ್ಲಿ ರಾಷ್ಟ್ರೀಯ ಹೆದ್ದಾರಿ ಮೇಲೆ ಅಳವಡಿಸಲಾಗಿದ್ದ ಸ್ವಾಗತ ಕಮಾನುಗಳು ಕಳಪೆ ಮಟ್ಟದಲ್ಲಿದ್ದು ಆ ರೀತಿ ಈ ಬಾರಿ ಆಗದಂತೆ ಸಭೆಯಲ್ಲಿ ಹಾಜರಿದ್ದ ಪೆಂಡಾಲ್ ಗುತ್ತಿಗೆದಾರರಿಗೆ ತಿಳಿಸಲಾಯಿತು. ಆದರೆ ರಾಷ್ಟ್ರೀಯ ಹೆದ್ದಾರಿಯು 80 ಫೂಟ ಅಗಲವಿದ್ದು ಅಲ್ಲಿ ಬಿದಿರಿನ ಬಂಬೂಗಳಿಂದ ಕಮಾನು ಮಾಡಿದರೆ ಅದು ಸ್ಥಿರವಾಗಿ ನಿಲ್ಲುವುದಿಲ್ಲ ಬದಲಾಗಿ ಕಬ್ಬಿಣದ ಪೈಪುಗಳಿಂದ ಕಮಾನು ಮಾಡಿ ಪ್ರತಿ ವರ್ಷ ಅವುಗಳನ್ನೇ ಉಪಯೋಗಿಸಬಹುದಾಗಿದೆ ಅಂತಾ ಪೆಂಡಾಲ್ ಗುತ್ತಿಗೆದಾರರು ಸಭೆಗೆ ವಿವರಿಸಿದರು. ಈ ಬಗ್ಗೆ ಒಂದು ಪ್ರಸ್ತಾವಣೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಸಲ್ಲಿಸಲು ನಿರ್ಧರಿಸಲಾಯಿತು.

ಮೆರವಣಿಗೆ ಸಮಯದಲ್ಲಿ ಮಾರ್ಗದುದ್ದಕ್ಕೂ ಕುಡಿಯುವ ನೀರಿನ ಟ್ಯಾಂಕರಗಳನ್ನು ವ್ಯವಸ್ಥೆ ಮಾಡಲು ಮುಖ್ಯಾಧಿಕಾರಿ, ಪುರಸಭೆ ಬೈಲಹೊಂಗಲ ಇವರು ಮತ್ತು ಪ್ರತಿಯೊಂದು ಮನೆಯ ಮುಂದೆ ಆಯಾ ಮನೆಯವರು ಕುಡಿಯುವ ನೀರು ಇಡಲು, ಪಟ್ಟಣದಲ್ಲಿ ನೈರ್ಮಲ್ಯ ಕಾಪಾಡಲು ಪಟ್ಟಣದಲ್ಲಿ ಗ್ರಾಮ ಪಂಚಾಯತಿಯು ಕ್ರಮ ಜರುಗಿಸಬೇಕೆಂದು ಸಭಾಧ್ಯಕ್ಷರು ಸೂಚಿಸಿದರು.

**ಕ್ರಮ: ಕಾರ್ಯದರ್ಶಿ ಗ್ರಾಮ ಪಂಚಾಯತ, ಕಿತ್ತೂರ,**
**ಮುಖ್ಯಾಧಿಕಾರಿ, ಪುರಸಭೆ, ಬೈಲಹೊಂಗಲ**

ಕೋಟೆಯ ಆವರಣವನ್ನು ಸ್ವಚ್ಛಗೊಳಿಸುವ ಕಾರ್ಯದ ಕುರಿತು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯತ, ಬೈಲಹೊಂಗಲ ಇವರು ಕ್ರಮ ಜರುಗಿಸಬೇಕೆಂದು ಸಭಾಧ್ಯಕ್ಷರು ಸೂಚಿಸಿದರು.

**ಕ್ರಮ: ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ., ಬೈಲಹೊಂಗಲ.**

ವೇದಿಕೆಯ ಹತ್ತಿರ ಸಾಕಷ್ಟು ಅಲಂಕಾರಿಕ ಹೂದಾನಿಗಳನ್ನು ಇಡುವಂತೆ ಸಭೆಯಲ್ಲಿ ಹಾಜರಿದ್ದ ತೋಟಗಾರಿಕೆ ಉಪನಿರ್ದೇಶಕರಿಗೆ ಸಭಾಧ್ಯಕ್ಷರು ತಿಳಿಸಿದರು.

**ಕ್ರಮ: ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಳಗಾವಿ.**

ಕಿತ್ತೂರಿನಲ್ಲಿ ಚನ್ನಮ್ಮಾಜಿಯವರ ಮೂರ್ತಿಯ ಪಕ್ಕದಲ್ಲಿರುವಂತೆ ಕೋಟೆಯ ಎದುರಿಗಿನ ಅರಳಿಕಟ್ಟೆ ವೃತ್ತದಲ್ಲಿ ಹೈಮಾಸ್ಟ್ ಲ್ಯಾಂಪ್ ಅಳವಡಿಸಬೇಕೆಂದು ಸಭೆಯಲ್ಲಿ ಹಾಜರಿದ್ದ ಕಿತ್ತೂರಿನ ಸಾರ್ವಜನಿಕರು ಬೇಡಿಕೆ ಮಂಡಿಸಿದರು. ಹಾಜರಿದ್ದ ಎಲ್ಲರೂ ಇದನ್ನು ಬೆಂಬಲಿಸಿದ್ದರಿಂದ ಹಾಗೂ ಬೇಡಿಕೆಯು ಸಮಂಜಸವಾಗಿರುವುದರಿಂದ ಈ ಕುರಿತು ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಲಿಖಿತರೂಪದಲ್ಲಿ ಪ್ರಸ್ತಾವಣೆ ಸಲ್ಲಿಸಲು ಸಭಾಧ್ಯಕ್ಷರು ತಿಳಿಸಿರು.

ಸ್ವಾಗತ ಉಪಸಮಿತಿಯಲ್ಲಿರುವ ಅಧಿಕಾರೇತರ ಸದಸ್ಯರು ಕೇವಲ ಹೆಸರಿಗೆ ಮಾತ್ರ ಇದ್ದು ಅವರನ್ನೂ ಕೂಡ ಸಂಪೂರ್ಣವಾಗಿ ಉತ್ಸವದಲ್ಲಿ ತೊಡಗಿಸಿಕೊಳ್ಳುವ ಅವಶ್ಯಕತೆ ಇರುತ್ತದೆ, ಆದ್ದರಿಂದ ಸಮಾರಂಭಕ್ಕೆ ಆಗಮಿಸುವ ಗಣ್ಯರನ್ನು ವೇದಿಕೆಯವರೆಗೆ ಕರೆದುಕೊಂಡು ಬರುವುದು ಹಾಗೂ ನಂತರ ಅವರು ಹೊರಟುನಿಂತಾಗ ಅವರನ್ನು ವೇದಿಕೆಯಿಂದ ಅವರ ವಾಹನದವರೆಗೆ ಬೀಳ್ಕೊಡಲು ಸ್ವಾಗತ ಸಮಿತಿಯ ಅಧಿಕಾರೇತರ ಸದಸ್ಯರನ್ನು ತೊಡಗಿಸಿಕೊಳ್ಳಬೇಕೆಂದು ಸಭೆಯಲ್ಲಿ ಹಾಜರಿದ್ದ ಅಧಿಕಾರೇತರ ಸದಸ್ಯರು ಒತ್ತಾಯಪಡಿಸಿದರು. ಸಮಾರಂಭಕ್ಕೆ ಆಗಮಿಸುವ ಗಣ್ಯರನ್ನು ವೇದಿಕೆಯವರೆಗೆ ಕರೆದುಕೊಂಡು ಬರುವುದು ಹಾಗೂ ನಂತರ ಅವರು ಹೊರಟುನಿಂತಾಗ ಅವರನ್ನು ವೇದಿಕೆಯಿಂದ ಅವರ ವಾಹನದವರೆಗೆ ಬೀಳ್ಕೊಡಲು ಸ್ವಾಗತ ಸಮಿತಿಯ ಅಧಿಕಾರೇತರ ಸದಸ್ಯರಿಗೆ ಗುರುತಿನ ಚೀಟಿ ನೀಡಿ ಅವಕಾಶ ನೀಡಲು ಮತ್ತು ಗಣ್ಯ ಅತಿಥಿಗಳಿಗೆ ನಿಯೋಜಿಸಲಾಗುವ ಲೈಜನ್ ಆಫೀಸರ್ ಜೊತೆಗೆ ಒಬ್ಬೊಬರಂತೆ ಅರ್ಹ ಅಧಿಕಾರೇತರ ಸದಸ್ಯರನ್ನು ನಿಯೋಜಿಸುವ ಕುರಿತು ಅನುಮೋದನೆ ಕೋರಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವಣೆ ಸಲ್ಲಿಸಲು ಸಭಾಧ್ಯಕ್ಷರು ತಿಳಿಸಿದರು. ಅಲ್ಲದೆ ಗಣ್ಯಮಾನ್ಯರಿಗೆ, ಅತಿಥಿಗಳಿಗೆ ಮತ್ತು ಕಲಾವಿದರಿಗೆ ವಸತಿ ವ್ಯವಸ್ಥೆ ಮಾಡುವ ಸ್ಥಳಗಳಲ್ಲಿ ಒಬ್ಬ ಕಂದಾಯ ನಿರೀಕ್ಷಕ ಮಟ್ಟದ ಕಂದಾಯ ಇಲಾಖೆಯ ಸಿಬ್ಬಂದಿಯನ್ನು ಸೂಕ್ತ ವ್ಯವಸ್ಥೆಯ ಸಲುವಾಗಿ ನಿಯೋಜಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

**ಕ್ರಮ: ಉಪವಿಭಾಗಾಧಿಕಾರಿಗಳ ಕಾರ್ಯಾಲಯ..ಬೈಲಹೊಂಗಲ.**

ಸಭೆಯಲ್ಲಿ ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಿದ್ದಕ್ಕೆ ಧನ್ಯವಾದಗಳನ್ನು ತಿಳಿಸಿ, ವಹಿಸಿಕೊಡಲಾದ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಕೋರುತ್ತ, ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ವ್ಹಿ.ಬಿ.ಧಾಮಣ್ಣವರ)
ಉಪವಿಭಾಗಾಧಿಕಾರಿ,
ಬೈಲಹೊಂಗಲ ಉಪವಿಭಾಗ, ಬೈಲಹೊಂಗಲ.

ಕ್ರ..ಕಿತ್ತೂರು ಉತ್ಸವ-1/2011

ಉಪವಿಭಾಗಾಧಿಕಾರಿಗಳ ಕಾರ್ಯಾಲಯ,
ಬೈಲಹೊಂಗಲ, ದಿನಾಂಕ: 28.09.2010

ಪ್ರತಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಮಾಹಿತಿ ಕುರಿತು ಗೌರವಗಳೊಂದಿಗೆ ಸಲ್ಲಿಸಲಾಗಿದೆ.
ಪ್ರತಿಯನ್ನು ಸಂಬಂಧಿಸಿದ ಎಲ್ಲ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಉಪವಿಭಾಗಾಧಿಕಾರಿ,
ಬೈಲಹೊಂಗಲ ಉಪವಿಭಾಗ, ಬೈಲಹೊಂಗಲ.